ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-1**

ಸಂಖ್ಯೆ ಶಿವ/ಕೋಶ / ಸಾ.ವ/01/2020-21 ದಿನಾಂಕ 01/04/2022

ಜ್ಞಾಪನಾ

ವಿಷಯ : 2020-21ನೇ ಸಾಲಿನ ಸರ್ಕಾರಿ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರನ್ನು ಒಳಗೊಂಡಂತೆ ಪ್ರಾಥಮಿಕ ಶಾಲಾ ಶಿಕ್ಷಕರುಮತ್ತು ಪ್ರೌಢಶಾಲಾ ಶಿಕ್ಷಕರು/ ತತ್ಸಮಾನ ವೃಂದದ ಶಿಕ್ಷಕರು ಹಾಗೂ ಸರಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರುಗಳ ವರ್ಗಾವಣೆಗೊಳಿಸಿದ್ದು, ಇವರುಗಳನ್ನು ದಿ 9/04/2022 ರೊಳಗೆ ಕರ್ತವ್ಯದಿಂದ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ : 1) ಸರಕಾರದ ಪತ್ರ ಸಂಖ್ಯೆ: ಇಪಿ 26 ದಿನಾಂಕ 11/11/2020
2) ಸರಕಾರದ ಪತ್ರ ಸಂಖ್ಯೆ: ಇಪಿ 26 ದಿನಾಂಕ 23/11/2021
2) ಈ ಕಛೇರಿಯ ಪತ್ರದ ಸಮಸಂಖ್ಯೆ: ದಿ: 25/11/2021

* * * * * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, 2020-21 ನೇ ಸಾಲಿನ ವಿವಿಧ ಹಂತಗಳ ವರ್ಗಾವಣೆಗಳು ಈಗಾಗಲೇ ಪೂರ್ಣಗೊಂಡಿದ್ದು, ಕೆಲವು ಶಿಕ್ಷಕರು/ ಮುಖ್ಯಶಿಕ್ಷಕರುಗಳು ಇನ್ನು ವರ್ಗಾವಣೆ ಹೊಂದಿದ ಸ್ಥಳಗಳಲ್ಲಿ ಕರ್ತವ್ಯಕ್ಕೆ ಹಾಜರಾಗದಿರುವುದು ವಿಷಾದನೀಯ. ಆದ್ದರಿಂದ ವರ್ಗಾವಣೆ ಹೊಂದಿರುವ ಎಲ್ಲಾ ಅರ್ಹ ಶಿಕ್ಷಕರುಗಳನ್ನು ಪ್ರಸ್ತುತ ಇರುವ ಸ್ಥಳದಿಂದ ಕರ್ತವ್ಯದಿಂದ ಬಿಡುಗಡೆಗೊಳಿಸಿ ವರ್ಗಾವಣೆ ಹೊಂದಿದ ಸ್ಥಳಗಳಿಗೆ ಕೂಡಲೇ ದಿನಾಂಕ 09/04/22 ರೊಳಗೆ ಹಾಜರಾಗುವಂತೆ ಕ್ರಮ ಕೈಗೊಳ್ಳಲು ಸೂಚಿಸಿದೆ. ಮುಂದುವರಿದು, ನಿರ್ದಿಷ್ಟ ಪಡಿಸಿದ ಹುದ್ದೆಗಳಲ್ಲಿ ಕರ್ತವ್ಯನಿರ್ವಹಿಸುತ್ತಿರುವ ಶಿಕ್ಷಕರುಗಳು ಗರಿಷ್ಠ ಅವಧಿ ಪೂರ್ಣಗೊಳಿಸಿ ಕೌನ್ಸಿಲಿಂಗ್ ನಲ್ಲಿ ಶಾಲೆ ಆಯ್ಕೆ ಮಾಡಿಕೊಂಡಿರುವವರು ಸಹ ಕಡ್ಡಾಯವಾಗಿ ಆಯ್ಕೆ ಮಾಡಿಕೊಂಡಿರುವ ಶಾಲೆಯಲ್ಲಿ ದಿ: 9/4/2022 ರೊಳಗೆ ಕರ್ತವ್ಯಕ್ಕೆ ಹಾಜರಾಗಲು ಸೂಕ್ತ ಕ್ರಮ ವಹಿಸಲು ತಿಳಿಸಿದೆ. ದಿ: 9/4/2022 ರ ನಂತರ ಯಾವುದಾದರೂ ದೂರುಗಳು ಬಂದಲ್ಲಿ, ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿ/ ಉಪನಿರ್ದೇಶಕರ ವಿರುದ್ಧ ನಿಯಾಮಾನುಸಾರ ಶಿಸ್ತಿನ ಕ್ರಮ ವಹಿಸಲಾಗುವುದು ಎಂದು ತಿಳಿಸಿದೆ.

ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ,

ಇವರಿಗೆ

1) ರಾಜ್ಯದ ಎಲ್ಲಾ ಉಪನಿರ್ದೇಶಕರುಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಸೂಕ್ತ ಹಾಗೂ ತುರ್ತು ಕ್ರಮಕ್ಕಾಗಿ
2) ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಸೂಕ್ತ ಹಾಗೂ ತುರ್ತು ಕ್ರಮಕ್ಕಾಗಿ